# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2020-21

ದಿನಾಂಕ : 24/08/2021

**ವಾರ್ಡ್-130ರ ವಾರ್ಡ್ ಸಭೆಯ ನಡವಳಿ.**

**ದಿನಾಂಕ: 24/08/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ ಸಂ | ಸದಸ್ಯರ ಹೆಸರು/ ಪದನಾಮ | ಪದನಾಮ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಮುತ್ತುರಾಜ್ | ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು ನೋಡಲ್ ಅಧಿಕಾರಿ | 9880923954 |
| 2 | ಶ್ರೀ ಕೆ.ಎಂ. ಯಧುಕೃಷ್ಣ | ಸಹಾಯಕ ಇಂಜಿನಿಯರ್ ವಾರ್ಡ್-130 ಹಾಗೂ ಸದಸ್ಯ ಕಾರ್ಯದರ್ಶಿ | 9901050544 |
| 3 | ಶ್ರೀ ರಾಘವೇಂದ್ರ | ಸಹಾಯಕ ಅಭಿಯಂತರರುಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9108027357 |
| 4 | ಶ್ರೀಮತಿ ರೂಪ ಎಂ | ಸಹಾಯಕ ಇಂಜಿನಿಯರ್ (ವಿ) ಆರ್.ಆರ್.ಬಡಾವಣೆ | 9449870366 |
| 5 | ಶ್ರೀ ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9945886188 |
| 6 | ಶ್ರೀ. ಡಿ. ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9880243077 |
| 7 | ಶ್ರೀ ಬಿ.ಪಿ. ಚಿಕ್ಕರಾಜು | ಸಂಚಾರಿ ಪೊಲೀಸ್ ಕೆಂಗೇರಿ ಪೊಲೀಸ್ ಠಾಣೆ | 9482088276 |
| 8 | ಶ್ರೀ ಬೋರಯ್ಯ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ ಜ್ಞಾನಭಾರತಿ ಪೊಲೀಸ್ ಠಾಣೆ | 9945757556 |
| 9 | ಶ್ರೀ ಜಯರಾಂ | ವಾರ್ಡ್ ಕಮಿಟಿ ಸದಸ್ಯರು | 9845408277 |
| 10 | ಶ್ರೀ ಶಶಿಕುಮಾರ್ ಕೆ.ಆರ್ | ವಾರ್ಡ್ ಕಮಿಟಿ ಸದಸ್ಯರು | 9916183333 |

Scanned with CamScanner

| | | | |
|---|---|---|---|
| 11 | ಶ್ರೀ ಕದರಪ್ಪ ಎನ್ | ವಾರ್ಡ್ ಕಮಿಟಿ ಸದಸ್ಯರು | 9845796985 |
| 12 | ಶ್ರೀ ಜಿ.ಸತ್ಯ | ವಾರ್ಡ್ ಕಮಿಟಿ ಸದಸ್ಯರು | 9740785505 |
| 13 | ಶ್ರೀಮತಿ ಪ್ರೇಮ ಎನ್ | ವಾರ್ಡ್ ಕಮಿಟಿ ಸದಸ್ಯರು | 96845733617 |
| 14 | ಶ್ರೀಮತಿ ಸಬೀಹ ಅಂಜುಮ್ | ವಾರ್ಡ್ ಕಮಿಟಿ ಸದಸ್ಯರು | 9844239162 |
| 15 | ಶ್ರೀ ಬಸವರಾಜು ಓ.ಎಂ | ವಾರ್ಡ್ ಕಮಿಟಿ ಸದಸ್ಯರು | 9886181525 |
| 16 | ಶ್ರೀ ಶ್ರೀನಿವಾಸ್ ಮೂರ್ತಿ ವಿ | ವಾರ್ಡ್ ಕಮಿಟಿ ಸದಸ್ಯರು | 9845518763 |
| 17 | ಶ್ರೀ ಪ್ರಕಾಶ್ | ವಾರ್ಡ್ ಕಮಿಟಿ ಸದಸ್ಯರು | 8105878004 |
| 18 | ಶ್ರೀ ರಾಮು | ಗುತ್ತಿಗೆದಾರರು<br>ಬೀದಿ ದೀಪ ನಿರ್ವಹಣೆ | 9164232782 |
| 19 | ಶ್ರೀ ಜಿ.ಮುನಿರಾಜು | ವಾರ್ಡ್ ಕಮಿಟಿ ಸದಸ್ಯರು | 9900595969 |
| 20 | ಶರಣಪ್ಪ ಅಂಗಡಿ | ವಾರ್ಡ್ ಕಮಿಟಿ ಸದಸ್ಯರು | 9880781644 |
| 21 | ಶ್ರೀ ಶ್ರೀಧರ್ ಮೂರ್ತಿ | ವಾರ್ಡ್ ಕಮಿಟಿ ಸದಸ್ಯರು | 9341444982 |
| 22 | ಶ್ರೀ ಅನಿಲ್ ಕುಮಾರ್ | ವಾರ್ಡ್ ಕಮಿಟಿ ಸದಸ್ಯರು | 9148844823 |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

(1) ವಾರ್ಡ್ ಸಂಖ್ಯೆ:-130, ಉಲ್ಲಾಳು ಉಪನಗರ ವ್ಯಾಪ್ತಿಯಲ್ಲಿ ಕೋವಿಡ್-19 ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ನೋಡಲ್ ಅಧಿಕಾರಿಯವರು ಕೋವಿಡ್-19ರ ಸಾಂಕ್ರಾಮಿಕ

Scanned with CamScanner

ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ ದಾಖಲಾಗುವವರೆಗೆ ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಅಲ್ಲದೇ ಸುರಕ್ಷತಾ ಕ್ರಮ ವಹಿಸಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ತಿಳಿಸಿದರು.

(2) ಜಾನುವಾರುಗಳು ಮರಣ ಹೊಂದಿದಲ್ಲಿ ಸಮರ್ಪಕವಾಗಿ ಅವುಗಳನ್ನು ಹೂಳಲು ತಮ್ಮ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಯಿತು.

(3) ಮನೆ ಮನೆಗಳಿಗೆ ಸರಿಯಾದ ಸಮಯದಲ್ಲಿ ತೆರಳಿ ಕಸ ಸಂಗ್ರಹಿಸಿ ನಿರ್ವಹಿಸಲು ಸಂಬಂಧಿಸಿದ ಅಧಿಕಾರಿಯವರಿಗೆ ತಿಳಿಸಲಾಯಿತು.

(4) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಕೀರ್ತಿಬೇಕರಿ ಸಮೀಪ ರಸ್ತೆ ಗುಂಡಿಬಿದ್ದಿರುವ ಬಗ್ಗೆ ಸಭೆಯಲ್ಲಿ ಸಾರ್ವಜನಿಕರಿಂದ ಬಂದ ದೂರಿಗೆ ಸಂಬಂಧಿಸಿದಂತೆ ಮೋಡಲ್ ಅಧಿಕಾರಿಯವರು ಮಾತನಾಡಿ ಸದರಿ ಸ್ಥಳದಲ್ಲಿ ಬಿದ್ದಿರುವ ರಸ್ತೆ ಗುಂಡಿಯನ್ನು ಮುಚ್ಚಲು ಕ್ರಮವಹಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಲಾಯಿತು.

(5) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಆರ್.ಆರ್. ಬಡಾವಣೆಯಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಿಸಲು ಶ್ರೀಮತಿ ಸಭೀಹ ಬಾನು, ವಾರ್ಡ್ ಕಮಿಟಿ ಸದಸ್ಯರು ರವರು ಕೋರಿರುತ್ತಾರೆ. ಈ ಸಂಬಂಧ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:130ರವರು ಮಾತನಾಡಿ ಅನುದಾನದ ಲಭ್ಯತೆಯ ಮೇರೆಗೆ ಚರಂಡಿ ನಿರ್ಮಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

(6) ದುಬಾಸಿಪಾಳ್ಯದಲ್ಲಿ ನಿರ್ಮಿಸಲಾಗಿರುವ R.O. plant ನ್ನು ಪ್ರಾರಂಭಿಸಲು ಕ್ರಮಕ್ಕೈಗೊಳ್ಳಲು ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಯವರಿಗೆ ಸೂಚಿಸಲಾಯಿತು.

(7) ಸರ್ಕಾರಿ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲು ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಯವರಿಗೆ ಸೂಚಿಸಲಾಯಿತು.

Scanned with CamScanner

(8) ಸರ್ವೆ ನಂ.09ರಲ್ಲಿ ಕೊರೆದಿರುವ ಕೊಳವೆಬಾವಿಗಳಿಗೆ ಪೈಪ್‌ಲೈನ್‌ಗಳನ್ನು ಅಳವಡಿಸಿ ನೀರು ಸರಬರಾಜು ಮಾಡಲು ತಿಳಿಸಲಾಗಿರುತ್ತದೆ.

(9) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಭಗೀರಥ ಬಡಾವಣೆಯಲ್ಲಿ ಯುಜಿಡಿ ಪೈಪ್‌ಲೈನ್‌ಗಳನ್ನು ಸರಿಪಡಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಮುತ್ತುರಾಜ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

ಪ್ರತಿಯನ್ನು:

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ

Scanned with CamScanner